ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4
(ಸಿವಿಲ್)

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ. 182-2010

.......................... ವಿರುದ್ಧ ..........................

PW 4
CW 1

| | | |
|---|---|---|
| ಸಾಕ್ಷಿ ಹೆಸರು | ಃ | ಪ್ರದಿಪ ರಾಜಶೇಖರ ಮೊದಲಿಯಾರ |
| ತಂದೆ ಹೆಸರು | ಃ | ರಾಜಶೇಖರ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಹಲಸೂರು, ಬೆಂಗಳೂರು |

ದಿನಾಂಕಃ 17-02-2018 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ಆರೋಪಿಯನ್ನು ನೋಡಿರುತ್ತೇನೆ. ಈ ಪ್ರಕರಣದಲ್ಲಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಪಿರ್ಯಾದಿಯನ್ನು ನೀಡಿರುವುದಿಲ್ಲ. ಸದರಿ ಪಿರ್ಯಾದನ್ನು ನೋಡಿ ಗುರುತಿಸಿದ್ದು ಅದು ನಿಪಿ 10 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 10-ಎ ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ಮರು ಹೇಳಿಕೆಯನ್ನು ಕೊಟ್ಟಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಯಿತು ಅದು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು ಅದರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ 1-ಬಿ ಎಂದು ಗುರುತಿಸಲಾಯಿತು. ಸದರಿ ಇನ್ನೊಂದು ದಾಖಲೆಯನ್ನು ನೋಡಿದ್ದು ಅದು ನಕಾಶೆಯಾಗಿದ್ದು ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2-ಬಿ ಎಂದು ಗುರುತಿಸಲಾಯಿತು. ಇನ್ನೊಂದು ಜಪ್ತು ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು

ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 3-ಬಿ ಎಂದು ಗುರುತಿಸಲಾಯಿತು. ಜಪ್ತು ಪಂಚನಾಮೆಯ ಕಾಲಕ್ಕೆ ಮಾಡಿದ ನಕಾಶೆಯನ್ನು ನೋಡುತ್ತಿದ್ದು ಅದನ್ನು ನಿಪಿ-4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 4-ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗಳು ದೂರು, ಪಂಚನಾಮೆ, ಜಪ್ತ ಪಂಚನಾಮೆ ಹಾಗೂ ನಕಾಶೆಗಳಾಗಿದ್ದು ಅದರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನಾನು ಯಾವುದೇ ಘಟನಾ ಸ್ಥಳವನ್ನು ತೋರಿಸಿರುವುದಿಲ್ಲ. ಜಪ್ತ ಪಂಚನಾಮೆ ಕಾಲಕ್ಕೆ ಹಾಜರಿರುವುದಿಲ್ಲ ಹಾಗೂ ನಾನು ಯಾವುದೇ ಮರು ಹೇಳಿಕೆಯನ್ನು ನೀಡಿರುವುದಿಲ್ಲ. ಸದರಿ ಬಾವಚಿತ್ರಗಳನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ನಿಶಾನೆಯಾಗಿ ಗುರುರ್ತಿಸಲಾಗಿದೆ.

(ಈ ಹಂತದಲ್ಲಿ ಎ.ಪಿ.ಪಿ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಎ.ಪಿ.ಪಿ. ರವರಿಂದ.

ನಾನು ವರಾಹರ ಕನ್ಸಸ್ಟ್ರಕ್ರನ್ ಪ್ರೈ. ಕಂಪನಿಯಲ್ಲಿ ಜೂನಿಯರ್ ಮೆನೇಜರ್ ಆಗಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. ಸದರಿ ಕಂಪನಿಯ ಮಾಲೀಕರು ಅರುಣಕುಮಾರ, ರವಿಚಂದ್ರನ್ ಅನ್ನುವವರು ಇರುತ್ತಾರೆ ಎಂದರೆ ಸರಿಯಲ್ಲ. ನಮ್ಮ ವರಾಹರ್ ಕನ್ಸಸ್ಟ್ರಕ್ರನ್ ಬೆಂಗಳೂರು ಕಂಪನಿಗೆ ಅನಮೋಡದಿಂದ ಗೋವಾ ಬಾರ್ಡರವರೆಗೆ ಎನ್‌ಎಚ್-4-ಎಗೆ ಬಿ.ಸಿ ಕೆಲಸ ಮಾಡುವುದು ಮಂಜೂರಾಗಿತ್ತು ಎಂದರೆ ಸರಿಯಲ್ಲ. ಬಿ.ಸಿ ವರ್ಕ್ಸ ಮಾಡುವುದರ ಸುಲುವಾಗಿ ಲಕ್ಷ್ಮಣ ಗೋವಿಂದ ದೇಸಾಯಿ ಇವರು ಪ್ಲಾಟ್ ನಂ. 38 ಸೀತವಾಡ ಸರ್ವೆ ನಂ. 58ಎ-1, 26-27 ನೇದರಲ್ಲಿ ಒಂದು ಶೆಡ್ ಕಟ್ಟಿ ನಾನು ಮತ್ತು ಲೇಬರ್‌ಗಳಾದ ರಾಮಕೃಷ್ಣ ಮುರಳಿ ಈ ರೀತಿ ಕೂಡಿ ಇರುತ್ತೆವೆ ಎಂದರೆ ಸರಿಯಲ್ಲ. ಬ.ಸಿ ವರ್ಕ ಮಾಡುವ ಸಲುವಾಗಿ ಮಹಾರಾಷ್ಟ್ರದ ಬಾರ್ಡರ ದೇವರ ವಾಡಿ ಯಲ್ಲಿರುವ ದತ್ತಾ ಸ್ಟೇನ್ ಕ್ರಸರದಿಂದ ಮತ್ತು ಬೆಳಗಾಂವ ಉಚ್ಚವಾಡಿ ಪೊಪ್ಯುಲರ್ ಸ್ಟೋನ್ ಕ್ರಸರದಿಂದ ಕಲ್ಲು ಕಡಿ ನಮ್ಮ ಟಿಪ್ಪರ ಮೇಲೆ ತಂದು ಸದರ ಸೀತವಾಡ ಸರ್ವೆ ನಂ. 58-ಎ1 26+27 ನೇದರಲ್ಲಿ ತಂದು ದಾಸ್ತಾನು ಮಾಡಿ ಅಲ್ಲಿಂದ ಡಾಂಬರ ಮಿಕ್ಸಮಾಡಿ ಅನ್ಮೋಡಕ್ಕೆ ಒಯ್ದು ಬಿ.ಸಿ.ವರ್ಕ್ಸ ಮಾಡುತ್ತೇವೆ ಎಂದರೆ ಸರಿಯಲ್ಲ. ಸದರ ಕಲ್ಲು ಕಡಿ ತರಲು ಮತ್ತು ಡಾಂಬರ ಮಿಕ್ಸ ಮಾಡಿ ಒಯ್ಯಲು ತಮಿಳುನಾಡಿನಿಂದ ಜೆಸಿಬಿ-1 ಮತ್ತು ಟಿಪ್ಪರ ನಂ. ಟಿಎನ್-48-ಪಿ0799, ಟಿಎನ್-48-ಪಿ-0599, ಟಿಎನ್-48-ಕೆ-8507, ಟಿಎನ್-48-

ಜೆ-6305, ಟಿಎನ್-09-ಎಕೆ-1730, ಟಿಎನ್-48-ಕೆ-7430 ನೇಯವುಗಳ ತಂದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಟಿಪ್ಪರಗಳ ಮೇಲೆ ಕಡಿ ತಂದು ದಾಸ್ತಾನು ಮಾಡುವುದು ಮತ್ತು ಡಾಂಬರ ಮಿಕ್ಸ ಮಾಡಿ ಆನ್ಮ್ರೋಡಕ್ಕೆ ಒಯ್ಯುವುದು ಮಾಡಿ ರಾತ್ರಿ 8-0 ಗಂಟೆಯ ಸಮಯಕ್ಕೆ ನಮ್ಮ ಕೆಲಸ ಬಂದ ಮಾಡಿ ಸದರ ಟಿಪ್ಪರಗಳನ್ನು ಸದರ ಪ್ಲಾಟನಲ್ಲಿ ನಮ್ಮ ಶೇಡ್ಡಿನ ಮುಂದುಡೆ ನಿಲ್ಲಿಸಿ ರಾತ್ರಿ ಊಟ ಮಾಡಿ ಸದರ ಟಿಪ್ಪರ ಡ್ರೈವರಗಳು ಅವರವರ ಟಿಪ್ಪರಗಳ ಮೇಲೆ ಮಲುಗುತ್ತಾರೆ ಅದರಲ್ಲಿ ಟಿಪ್ಪರ್ ನಂ. ಟಿಎನ್-48-ಪಿ-0599 ನೇದರ ಚಾಲಕನು ಮಾತ್ರ ಸದರ ಟಿಪ್ಪರನ ಮೇಲೆ ಮಲಗದೆ ಸದರ ಟಿಪ್ಪರ ಕೆಳಗಡೆ ನೆಲದ ಮೇಲೆ ಮಲಗಿರುತ್ತಾನೆ ಎಂದರೆ ಸರಿಯಲ್ಲ. ರಾತ್ರಿ ಎಲ್ಲಾ ಬೇರೆ ಟಿಪ್ಪರಗಳು ಕಡಿ ತೆಗೆದುಕೊಂಡು ಬರುತ್ತವೆ. ಆ ಬಗ್ಗೆ ನಾನು ಮತ್ತು ಲೇಬರ್ ಜನರು ನಂಬರ ನಮೂದು ಮಾಡುತ್ತೇವೆ ಎಂದರೆ ಸರಿಯಲ್ಲ.

ದಿಃ 13-12-2009 ರಂದು ರಾತ್ರಿ 8-00 ಕ್ಕೆ ನಮ್ಮ ಆರು ಟಿಪ್ಪರಗಳನ್ನು ನಮ್ಮ ಶೇಡ್‌ನ ಮುಂದುಗಡೆ ಅವುಗಳ ಚಾಲಕರು ನಿಲ್ಲಿಸಿಟ್ಟಿದ್ದರು ಎಂದರೆ ಸರಿಯಲ್ಲ. ರಾತ್ರಿ ಊಟ ಮಾಡಿಕೊಂಡು 10-00 ಗಂಟೆಗೆ ಟಪ್ಪರ ಚಾಲಕರು ತಮ್ಮ ತಮ್ಮ ಟಿಪ್ಪರಗಳ ಮೇಲೆ ಮಲಗಿಕೊಂಡಿದ್ದರು ಎಂದರೆ ಸರಿಯಲ್ಲ. ಟಿಪ್ಪರ ನಂ. ಟಿ.ಎನ್.48-ಪಿ-0599 ನೇದರ ಚಾಲಕನಾದ ತಿರುಪತಿ ಇತನು ಟಿಪ್ಪರಗಳ ಮೇಲೆ ಮಲಗದೆ ಅದರ ಕೆಳಗಡೆ ಅಂದರೆ ಶೇಡ್‌ನ ವರಾಂಡ್‌ದಲ್ಲಿ ಮಲಗಿಕೊಂಡಿದ್ದನು ಎಂದರೆ ಸರಿಯಲ್ಲ. ನಾವು 4 ಜನರು ಶೇಡ್‌ನ ಒಡಗಡೆ ಮಲಗಿಕೊಂಡಿದ್ದೆವು ಎಂದರೆ ಸರಿಯಲ್ಲ. ರಾತ್ರಿ 12-00 ಗಂಟೆಗೆ ಟಪ್ಪರ ನಂ. ಕೆಎ-22-ಬಿ-791 ಮತ್ತು ಕೆಎ-22-ಬಿ-788 ನೇಯವುಗಳು ಕಡಿ ತೆಗೆದುಕೊಂಡು ಖಾಲಿ ಮಾಡಿದ ಬಗ್ಗೆ ನಮೂದು ಮಾಡಿ ಮಲಗಿಕೊಂಡನು ಎಂದರೆ ಸರಿಯಲ್ಲ. ಮತ್ತು ದಿಃ 14-12-2009 ರಂದು ಬೆಳಗಿನ ಜಾವ 05-20 ಗಂಟೆಗೆ ಟಪ್ಪರ ನಂ. ಕೆಎ-31-6102 ಮತ್ತು ಕೆಎ-31-5981 ನೇಯವುಗಳ ಸಹ ಕಡಿ ತುಂಬಿಕೊಂಡು ಬಂದು ಖಾಲಿ ಮಾಡಿ ಬಂದ ಬಗ್ಗೆ ನಮ್ಮ ಲೇಬರ್ ಮುರಳಿ ನಮೂದು ಮಾಡಿ ನಂತರ ಶೇಡನ ಒಳಗಡೆ ಹೋಗಿ ಮಲಗಿಕೊಂಡನು ಎಂದರೆ ಸರಿಯಲ್ಲ. ಬೆಳಿಗ್ಗೆ 05-45 ಗಂಟೆಗೆ ಟಪ್ಪರ ನಂ.ಟಿಎನ್.48-ಪಿ-0599 ನೇದು ನಿಲ್ಲಿಸಿಟ್ಟ ಜಾಗೆಯಲ್ಲಿ ಇಲ್ಲದ ಬಗ್ಗೆ ಅದರ ಚಾಲಕ ತಿರುಪತಿ ಇತನು ಬಂದು ನನ್ನ ಹತ್ತಿರ ಬಂದು ಎಬ್ಬಿಸಿ ಹೇಳಿದನು ಎಂದರೆ ಸರಿಯಲ್ಲ. ನಾವು ಮತ್ತು ಟಿಪ್ಪರ ಚಾಲಕರೆಲ್ಲರೂ ಕೂಡಿ ನಮ್ಮ ಪ್ಲಾಂಟನಲ್ಲಿ ಸುತ್ತಮುತ್ತಲು ಮತ್ತು ಜಂಗಲದಲ್ಲಿ ಕೂಡಿ ಹುಡಕಾಡಿದರು ಸಿಗಲಿಲ್ಲ ಸದರಿ ಟಪ್ಪರನ್ನು ಬೆಳಿಗಿನ ಜಾವಾ 5-20 ರಿಂದ 5-45 ಗಂಟೆಯ ನಡುವಿನ ಅವಧಿಯಲ್ಲಿ ಯಾರೋ ಕಳ್ಳರು ಕಳುವು ಮಾಡಿಕೊಂಡು

ಒಯ್ದ ಬಗ್ಗೆ ಖಾತ್ರಿಯಾಯಿತು ಎಂದರೆ ಸರಿಯಲ್ಲ. ಸದರ ಟಿಪ್ಪರನ್ನು ಎಲ್ಲರೂ ಕೂಡಿ ಹುಡಕಾಡಿದೆವು ಎಂದರೆ ಸರಿಯಲ್ಲ. ಸದರ ಟಿಪ್ಪರನ ಬಗ್ಗೆ ಎಲ್ಲಾ ಕಡೆ ಹುಡುಕಾಡಿ ನಮ್ಮ ಕಂಪನಿಯ ಮಾಲೀಕರಿಗೆ ತಿಳಿಸಿದೆವು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಫಿರ್ಯಾದನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಂತರ ನಾನು ದಿಃ 15-12-2009 ರಂದು ನಾನು ತೋರಿಸಿದ ಗಟನಾ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ಗಟನಾ ಸ್ಥಳದ ಪಂಚನಾಮೆ ಹಾಗೂ ನಕಾಶೆಯನ್ನು ತಯಾರಿಸಿರುತಾತರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು 7-00 ಗಂಟೆಯಿಂದ 8-00 ಗಂಟೆಯವರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿಃ 21-12-2009 ರಂದು ನಾನು ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯಲ್ಲಿ ನಾನು ಎರಡು ಟಾಯರಗಳನ್ನು ಮತ್ತು ದಸ್ತಗಿರಿಯಾದ ಆರೋಪಿಯನ್ನು ಪೋಲಿಸ ಠಾಣೆಯಲ್ಲಿ ನೋಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 14-12-2009 ರಂದು ಬೆಳಗಿನ ಜಾವ 03-00 ಗಂಟೆಯ ಸಮಯಕ್ಕೆ ಇದೇ ಆರೋಪಿತನು ಕಳುವು ಮಾಡಿದ ಒಯ್ದು ಕಾಮತಗಾ ಜಂಗಲದಲ್ಲಿ ಇಟ್ಟು ಜಾಕ್ ಹಚ್ಚಿ ತೆಗೆದ ಎರಡು ಟಾಯರಗಳನ್ನು ಅದೇ ಜಂಗಲದಲ್ಲಿ ಇನ್ನೊಂದು ಕಡೆ ಬಚ್ಚಿಟ್ಟ ಬಗ್ಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಆರೋಪಿತನ ಹೆಸರು ಜ್ಞಾನೇಶವರ ತಂದೆ ಪಾಂಡುರಂಗ ಹತ್ತಳಗೆ ಅಂತಾ ತಿಳಿಯಿತು ಎಂದರೆ ಸರಿಯಲ್ಲ. ಈ ರೀತಿಯಾಗಿ ನಾನು ಮರುಹೇಳಿಕೆಯಲ್ಲಿ ಹೇಳಿಕೆಯನ್ನು ನೀಡಿದ್ದೆನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿರಾಕರಿಸಿದ್ದರಿಂದ ಅದನ್ನು ನಿಪಿ 11 ಎಂದು ಗುರುತಿಸಲಾಯಿತು.

ನಂತರ ಅದೇ ದಿನ 21-12-2009 ರಂದು ಪೋಲಿಸರ ವಶದಲ್ಲಿದ್ದ ಆರೋಪಿಯು ಏನು ಹೇಳಿ ಏನು ಹಾಜರಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರ ಟಾಯರ್‌ಗಳನ್ನು ಬಚ್ಚಿಟ್ಟ ಸ್ಥಳ ಹಾಗೂ ಟಿಪ್ಪರ ಕಳ್ಳತನ ಮಾಡಿದ ಸ್ಥಳ ತೋರಿಸುತ್ತೇನೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಚಾಸಾ 2 ಮತ್ತು ಚಾಸಾ 4 ರವರ ಸಮಕ್ಷಮ ಪೋಲಿಸರು ಆರೋಪಿ ತೋರಿಸಿದ ಸ್ಥಳಗಳಲ್ಲಿ ಪಂಚನಾಮೆ ಜರುಗಿಸಿ ಸದರಿ ಎರಡು ಟಾಯರ್‌ಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಟಿಪ್ಪರನ್ನು ಆರೋಪಿ ತೋರಿಸಿದ ಸ್ಥಳದಿಂದ ಜಪ್ತುಪಡಿಸಿಕೊಂಡಿರುತ್ತಾರೆ ಎದರೆ ಸರಿಯಲ್ಲ. ಸದರಿ ಟಿಪ್ಪರನ್ನು ನಾನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು

ಹಾಗೂ ನಕಾಶೆಯನ್ನು 4-00 ಗಂಟೆಯಿಂದ 6-00 ಗಂಟೆಯವರೆಗೆ ಮಾಡಿ ಮುಗಿಸಿರುತ್ತಾರೆ ಎಂದರೆ ಸರಿಯಲ್ಲ.

ಈ ಎಲ್ಲಾ ವಿಷಯ ಗೊತ್ತಿದ್ದರು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರವಾಗಿ ವಕೀಲರಿಂದ.

ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿದ್ದಾರೆ.

ಮರು ವಿಚಾರಣೆಃ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.